ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಬೆಂಗಳೂರು-560023**

ಸಂಖ್ಯೆ: ಲಿಪಿಕ(1)/199/2019-20 ದಿನಾಂಕ:03.07.2021

## ಸುತ್ತೋಲೆ

ವಿಷಯ:- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು/ಶೀಘ್ರಲಿಪಿಗಾರರುಗಳಿಗೆ ಕಛೇರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ:- 1. ಈ ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಲಿಪಿಕ(1)191/2019-20 ದಿನಾಂಕ:29.02.2020, 05.06.2020, 01.10.2020.
2. ಈ ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಲಿಪಿಕ(1)192/2019-20 ದಿನಾಂಕ:29.02.2020.
3. ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ಪತ್ರ ದಿನಾಂಕ:29.02.2020
4. ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ:4322-4342/2020 ದಿನಾಂಕ:20.10.2020 ಹಾಗೂ ಇತರೆ ಇದಕ್ಕೆ ಸಂಬಂಧಿಸಿದ ಅರ್ಜಿಗಳು

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಹೊರತುಪಡಿಸಿದ ಭಾಗದಲ್ಲಿ ಪ್ರಥಮ ದರ್ಜೆ ಸಹಾಯಕರು/ಶೀಘ್ರಲಿಪಿಗಾರರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಉಲ್ಲೇಖ(1&2)ರ ಅಂತಿಮ ಜೇಷ್ಠತಾ ಪಟ್ಟಿಯಂತೆ ಈ ಕೆಳಕಂಡ ಜೇಷ್ಠತಾ ಸಂಖ್ಯೆಯ ಅನುಸಾರ (ಈಗಾಗಲೇ ಕಛೇರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ ಪಡೆದು ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಹೊರತುಪಡಿಸಿ) ಉಳಿದ ಅರ್ಹ ನೌಕರರಿಗೆ ಕಛೇರಿ ಅಧೀಕ್ಷಕರ ಹುದ್ದೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಪದೋನ್ನತಿ ನೀಡುವ ಸಲುವಾಗಿ ದೃಢಿಕೃತ ದಾಖಲಾತಿಗಳೊಂದಿಗೆ ಕಾರ್ಯನಿರ್ವಾಹಣಾ ವರದಿ ಮತ್ತು ಇತರೆ ಅರ್ಹ ದಾಖಲಾತಿಗಳನ್ನು ನಿಗಧಿತ ದಿನಾಂಕದ ಒಳಗೆ ಸಲ್ಲಿಸುವುದು.

**ಪ್ರಥಮ ದರ್ಜೆ ಸಹಾಯಕರು**

| | | |
|---|---|---|
| **ಕಲ್ಯಾಣ ಕರ್ನಾಟಕ ನೌಕರರು** | | |
| 01 | ಸಾಮಾನ್ಯ ವರ್ಗ/ಪರಿಶಿಷ್ಟಜಾತಿ/ಪಂಗಡ | ಜೇಷ್ಠತಾ ಸಂಖ್ಯೆ:01 ರಿಂದ 90 |
| **ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ ನೌಕರರು** | | |
| 01 | ಸಾಮಾನ್ಯ ವರ್ಗ/ಪರಿಶಿಷ್ಟಜಾತಿ/ಪಂಗಡ | ಜೇಷ್ಠತಾ ಸಂಖ್ಯೆ:01 ರಿಂದ 500 |

**ಶೀಘ್ರಲಿಪಿಗಾರರು**

| | | |
|---|---|---|
| **ಕಲ್ಯಾಣ ಕರ್ನಾಟಕ ನೌಕರರು** | | |
| 01 | ಸಾಮಾನ್ಯ ವರ್ಗ/ಪರಿಶಿಷ್ಟಜಾತಿ/ಪಂಗಡ | ಜೇಷ್ಠತಾ ಸಂಖ್ಯೆ:01 ರಿಂದ 04 |
| **ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ ನೌಕರರು** | | |
| 01 | ಸಾಮಾನ್ಯ ವರ್ಗ/ಪರಿಶಿಷ್ಟಜಾತಿ/ಪಂಗಡ | ಜೇಷ್ಠತಾ ಸಂಖ್ಯೆ:01 ರಿಂದ 12 |

1. ಐದು ವರ್ಷಗಳ ಕಾರ್ಯನಿವಾರ್ಹಣ ವರದಿ ನಿಗಧಿತ ನಮೂನೆ (4,5,6 ಮತ್ತು 7 ನಿಯಮ) ಭಾಗ-1 ವೈಯಕ್ತಿಕ ಮಾಹಿತಿ. ಭಾಗ-2 ಸ್ವಯಂ ಮೌಲ್ಯ ಮಾಪನ, ಭಾಗ-3 ವರದಿ, ಭಾಗ-4 ಪುನರಾವಲೋಕನ ಭಾಗ-5 ಅಂಗೀಕಾರ, ಭಾಗ-6 ಸಂವಹನ (2016-17, 2017-18, 2018-19, 2019-20, 2020-21 ರವರಗೆ ಪ್ರತಿ ವರ್ಷಕ್ಕೆ ಪ್ರತ್ಯಕವಾಗಿ ಸಲ್ಲಿಸಿಸುವುದು. (ನಿಗಧಿತ ಮಾದರಿಯ ನಮೂನೆಯಲ್ಲಿ ಸಲ್ಲಿಸದ ಕಾರ್ಯನಿರ್ವಹಣಾ ವರದಿಗಳನ್ನು ತಿರಸ್ಕರಿಸಲಾಗುವುದು.)
2. ಪದೋನ್ನತಿಗೆ ಅರ್ಜಿ ಸಲ್ಲಿಸುವಾಗ ಕಡ್ಡಾವಾಗಿ ಜೇಷ್ಠತಾ ಸಂಖ್ಯೆ ನಮೂದಿಸುವುದು.
3. ನೇಮಕಾತಿ ಆದೇಶ.
4. ಈ ಹಿಂದಿನ ಹುದ್ದೆಯ ಪದೋನ್ನತಿ ಆದೇಶ ಪ್ರತಿ.

5. ಖಾಯಂ ಪೂರ್ವಾ ಸೇವಾವಧಿ ಘೋಷಣೆಯ ಪ್ರತಿ.
6. ಅಕೌಂಟ್ಸ್ ಹೈಯರ್ ಉತ್ತೀರ್ಣರಾದ ಪ್ರಮಾಣ ಪತ್ರ
7. ಎಸ್.ಎಸ್.ಎಲ್.ಸಿ ಅಂಕಪಟ್ಟಿ.
8. ಕನ್ನಡ ಭಾಷೆ ಪರೀಕ್ಷೆಯ ಪ್ರಮಾಣ ಪತ್ರ. ಅಥವಾ ಎಸ್.ಎಸ್.ಎಲ್.ಸಿ ಪರಿಕ್ಷೆಯಲ್ಲಿ ಕನ್ನಡ ಭಾಷೆ ಪರೀಕ್ಕೆ ಪಾಸು ಮಾಡಿರುವ ಬಗ್ಗೆ ನಿಗಧಿತ ನಮೂನೆಯ ಕನ್ನಡ ವಿನಾಯಿತಿ ಪ್ರಮಾಣ ಪತ್ರ.
9. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷಾರತಾ ಪರೀಕ್ಷೆ) ನಿಯಮಗಳು–2012 (ತಿದ್ದುಪಡಿ) 2017 ಮತ್ತು 2020 ರಂತೆ ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಗಣಕಯಂತ್ರ ಸಾಕ್ಷಾರತಾ ಪರೀಕ್ಷೆ ಉತ್ತೀರ್ಣರಾಗಿರುವ ಅಂಕಪಟ್ಟಿ/ಪ್ರಮಾಣ ಪತ್ರ.
10. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಇತ್ತಿಚಿನ ಪ್ರಮಾಣ ಪತ್ರ ಹಾಗೂ ಈ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿರುವ ನಕಲು ಪ್ರತಿ ಮತ್ತು ಸೇವೆಗೆ ಸೇರುವಾಗ ಯಾವ ವರ್ಗದಡಿ ನೇಮಕಾತಿಗೊಂಡಿರುತ್ತಾರೆ.
11. ಶೀಘ್ರಲಿಪಿಗಾರರ ಐದು ವರ್ಷದ ಸೇವೆಯೊಂದಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ತರಬೇತಿ ಹೊಂದಿರುವ ನೌಕರರ ಸೇವಾ ಧೃಡಿಕರಣ ಪತ್ರ.
12. ನೌಕರರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದಮ್ಮೆ/ನ್ಯಾಯಲಯದ ಪ್ರಕರಣಗಳ ಬಗ್ಗೆ.
13. ಕಲ್ಯಾಣ–ಕರ್ನಾಟಕ ಭಾಗದ ಮೀಸಲಾತಿ ಬಯಸುವರು ನಮೂನೆ–ಡಿ ಪ್ರತಿಯನ್ನು ಸಲ್ಲಿಸುವುದು.
14. **ಖಾಲಿ ಇರುವ ಕಛೇರಿ ಅಧೀಕ್ಷಕರ ಹುದ್ದೆಗಳ ವಿವರಗಳನ್ನು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು ತಪ್ಪದೆ ನಿಗಧಿತ ದಿನಾಂಕದೊಳಗೆ ಸಲ್ಲಿಸುವುದು.**
15. ಈಗಾಗಲೇ ಪದೋನ್ನತಿ ತಿರಸ್ಕರಿಸಿದ ನೌಕರರ ವಿವರವನ್ನು ಸೇವಾ ಪುಸ್ತಕದಲ್ಲಿ ನಮೂದಿಸಿರುವ ಪ್ರತಿ.

**ವಿಶೇಷ ಸೂಚನೆ(1):– ಈ ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂಖ್ಯೆ:ಲಿಪಿಕ(1)199/2019–20 ದಿನಾಂಕ:29.02.2020 ರಂತೆ ಎಲ್ಲಾ ಅರ್ಹ ದಾಖಲಾತಿಗಳನ್ನು ಈಗಾಗಲೇ ಸಲ್ಲಿಸಿರುವ ನೌಕರರು ಮಾತ್ರ ಈಗ ಪದೋನ್ನತಿಗಾಗಿ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ 2020–21 ನೇ ಸಾಲಿನ ವಾರ್ಷಿಕ ಕಾರ್ಯ ನಿವಾರ್ಹಣಾ ವರದಿ ಹಾಗೂ ನೌಕರರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದಮ್ಮೆ/ನ್ಯಾಯಲಯದ ಪ್ರಕರಣಗಳ ಬಾಕಿಯ ಮಾಹಿತಿಯನ್ನು ದಾಖಲೆಯೊಂದಿಗೆ ಮಾತ್ರ ಸಲ್ಲಿಸುವುದು. ಅದರೆ ಸದರಿ ನೌಕರರು ಪದೋನ್ನತಿಗೆ ಇಚ್ಚೆ ಇಲ್ಲದಿದ್ದರೆ ಈ ಹಿಂದಿನ ಅರ್ಜಿಯನ್ನು ಪರಿಗಣಿಸುವುದಿಲ್ಲ.**

ಮೇಲ್ಕಂಡ ಎಲ್ಲಾ ಮಾಹಿತಿಯ ದಾಖಲೆಗಳನ್ನು ದೃಢಿಕರಿಸಿ ನಿಗಧಿತ ಅವಧಿಯೊಂಳಗೆ ಸಲ್ಲಿಸಲು ಆಸ್ಪತ್ರೆ/ಕಛೇರಿಯ ಮುಖ್ಯಸ್ಥರು ಹಾಗೂ ನಿಯಂತ್ರಣಾಧಿಕಾರಿಗಳು ಅಗತ್ಯ ಕ್ರಮವನ್ನು ವಹಿಸತಕ್ಕದ್ದು. ಸದರಿ ಪದೋನ್ನತಿ ಪ್ರಸ್ತಾವನೆಗಳು ಸಕಾಲದಲ್ಲಿ ಮಾಹಿತಿ ಬಾರದೇ ನೌಕರರು ಪದೋನ್ನತಿಯಿಂದ ವಂಚಿತರಾಗಿದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿ/ನಿಯಂತ್ರಣಾಧಿಕಾರಿಗಳೆ ನೇರವಾಗಿ ಜವಾಬ್ದಾರರನ್ನಾಗಿಸಲಾಗುವುದು. ನಿಗಧಿತ ಅವಧಿಯಲ್ಲಿ ಪ್ರಸ್ತಾವನೆ ಸಲ್ಲಿಸದೇ, ತಡವಾಗಿ ಬಂದ ಅರ್ಜಿಗಳನ್ನು ಪದೋನ್ನತಿಗೆ ಪರಿಗಣಿಸಲಾಗುವುದಿಲ್ಲ ಮತ್ತು ಈ ಪದೋನ್ನತಿಗೆ ನ್ಯಾಯಲಯಕ್ಕೆ ದಾವೆ ಹೂಡಲು ನೌಕರರು ಕಡ್ಡಾಯವಾಗಿ ನಿಯಮನುಸಾರ ಇಲಾಖೆಯ ಅನುಮತಿ ಇಲ್ಲದೇ ನ್ಯಾಯಲಯಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಆದ್ದರಿಂದ ಮೇಲಿನ ಎಲ್ಲಾ ಮಾಹಿತಿಯನ್ನು ಸರಿಯಾಗಿ ಪರಿಶೀಲಿಸಿ ಸಂಬಂಧಪಟ್ಟ ನೌಕರರ ಆಸ್ಪತ್ರೆ/ಕಛೇರಿಯ ಮುಖ್ಯಸ್ಥರು ಹಾಗೂ ನಿಯಂತ್ರಣಾಧಿಕಾರಿಗಳು ಪರಿಶೀಲಿಸಿ ದಿನಾಂಕ:13.07.2021 ರ ಸಂಜೆ 05.00 ಗಂಟೆಯ ಒಳಗೆ ಆಡಳಿತಾಧಿಕಾರಿಗಳು (ಸಾಮಾನ್ಯ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, 5 ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023 ಇಲ್ಲಿಗೆ ತಪ್ಪದೆ ಮುದ್ದಾಂ ಸಲ್ಲಿಸಲು ಸೂಚಿಸಿದೆ. ತದನಂತರ ಬಂದ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು

-----3ಕ್ಕೆ

ವಿಶೇಷ ಸೂಚನೆ(2):-

1) Karunadu.karnataka.gov.in/hfw ಅಂತರ್ಜಾಲದಲ್ಲಿ ದಿನಾಂಕ: 29-02-2020ರಲ್ಲಿದ್ದಂತೆ ಪ್ರಕಟಿಸಲಾಗಿರುವ ಪ್ರಥಮ ದರ್ಜೆ ಸಹಾಯಕರ/ಶೀಘ್ರಲಿಪಿಗಾರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸತಕ್ಕದ್ದು.
2) ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುವ ಈ ಸುತ್ತೋಲೆಯನ್ನು ಇಲಾಖೆಯ ಸಂಬಂಧಪಟ್ಟ ಎಲ್ಲಾ ಜಿಲ್ಲಾ ಮಟ್ಟದ / ತಾಲ್ಲೂಕು ಮಟ್ಟದ ಅಧಿಕಾರಿಗಳು, ನಿರ್ದೇಶಕರು ಹಾಗೂ ಡೀನ್, ಸ್ವಾಯತ್ತ ಸಂಸ್ಥೆ, ಜಿಲ್ಲಾ ಶಸ್ತ್ರ ಚಿಕಿತ್ಸಕರು,/ವೈದ್ಯಕೀಯ ಅಧೀಕ್ಷಕರು, ಪ್ರಾಂಶುಪಾಲರು, ಆಕುಕ ತರಬೇತಿ ಕೇಂದ್ರ, ಅಧಿಕಾರಿ ವರ್ಗದವರು ಕಡ್ಡಾಯವಾಗಿ ಪರಿಶೀಲಿಸಿ, ಎಲ್ಲಾ ಸಂಬಂಧಪಟ್ಟ ನೌಕರರ ಗಮನಕ್ಕೆ ತಂದು ಸಹಿ ಮಾಡಿಸಿಕೊಳ್ಳತಕ್ಕದ್ದು.
3) ನೌಕರರ ಗಮನಕ್ಕೆ ತರದೇ ನ್ಯಾಯಾಲಯದ ಪ್ರಕರಣ, ದೂರುಗಳ ದಾಖಲಾದಲ್ಲಿ ಸಂಬಂಧಪಟ್ಟ ಅಧಿಕಾರಿ ವರ್ಗದವರನ್ನು ನೇರ ಹೊಣೆಗಾರರನ್ನಾಗಿಸಿ, ನಿಯಮಾನುಸಾರ ವಿಧಿಸಲಾಗುವ ದಂಡ ಅಥವಾ ಶಿಕ್ಷೆಗೆ ಗುರಿಪಡಿಸಲಾಗುವುದು.
4) ಸಿ.ಆರ್ ಪಡೆದುಕೊಳ್ಳಲು ದಿನಾಂಕ: 13.07.2021 ಕಡೆಯ ದಿನಾಂಕವಾಗಿದ್ದು, ಆನಂತರ ಸಲ್ಲಿಸುವ ಸಿ.ಆರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಹಾಗೂ ಯಾವುದೇ ನೌಕರ ತನ್ನ ಹಕ್ಕನ್ನು ಕ್ಲೇಮ್ ಮಾಡಲು ಅವಕಾಶವಿರುವುದಿಲ್ಲ ಮತ್ತು ಈ ಸಂಬಂಧ ನ್ಯಾಯಾಲಯದಲ್ಲಿ ದಾವೇ ಹೂಡಬೇಕಾದಲ್ಲಿ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆಯದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದಲ್ಲಿ ಇದು ನಿಯಮಬಾಹಿರವಾಗುತ್ತದೆ.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು-560001.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು-560023.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-560009 (ತಮ್ಮ ಅಧೀನದ ಎಲ್ಲಾ ಸ್ವಾಯುತ್ತ ಸಂಸ್ಥೆಗಳಿಗೆ ಕಳುಹಿಸಲು ತಿಳಿಸಲಾಗಿದೆ)
4. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ, ಬೆಂಗಳೂರು (ತಮ್ಮ ಅಧೀನದ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಕಳುಹಿಸ'ಲಾಗಿದೆ)
5. ಅಪರ ನಿರ್ದೇಶಕರು, ಉತ್ತರ ಕರ್ನಾಟಕ ವಿಭಾಗ, ವಿಜಯಪುರ ಜಿಲ್ಲೆ.
6. ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರು, ಬಿ.ಬಿ.ಎಂ.ಪಿ/ಬೆಂಗಳೂರು ವಿಭಾಗ/ಮೈಸೂರು ವಿಭಾಗ/ಬೆಳಗಾವಿ ವಿಭಾಗ/ಕಲಬುರಗಿ ವಿಭಾಗ ಇವರ ಗಮನಕ್ಕೆ ತರುವುದೇನೆಂದರೆ, ನಿಮ್ಮ ಅಧೀನದ ಎಲ್ಲಾ ಅಧಿಕಾರಿಗಳ ಗಮನಕ್ಕೆ ಅಂರ್ತಜಾಲದಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯನ್ನು ಹಾಗೂ ಈ ಸುತ್ತೋಲೆಯನ್ನು ಆಸ್ಪತ್ರೆ/ಕಛೇರಿಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಹಾಗೂ ಸಂಬಂಧಪಟ್ಟ ನೌಕರರಿಗೆ ತಿಳಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದೆ.
7. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಗಮನಕ್ಕೆ ತರುವುದೇನೆಂದರೆ, ಅಂರ್ತಜಾಲದಲ್ಲಿ ಪ್ರಕಟಿಸಿರುವ ಈ ಸುತ್ತೋಲೆಯನ್ನು ತಮ್ಮ ಆದೀನದ ಎಲ್ಲಾ ಆಸ್ಪತ್ರೆ/ಕಛೇರಿಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಿದೆ.
8. ನಿರ್ದೇಶಕರು ಹಾಗೂ ಡೀನ್, ಬೆಂಗಳೂರು/ಮೈಸೂರು/ಮಂಡ್ಯ/ಬಳ್ಳಾರಿ/ಬೆಳಗಾವಿ/ರಾಯಚೂರು/ ಹುಬ್ಬಳ್ಳಿ/ಹಾಸನ/ಬೀದರ್/ಕಾರವಾರ/ಇತರೆ ಸ್ವಾಯುತ್ತ ಸಂಸ್ಥೆಗಳು.......................... ಜಿಲ್ಲೆ.
9. ವೈದ್ಯಕೀಯ ಅಧೀಕ್ಷಕರು, ಜಯನಗರ/ಸರ್.ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ/ಕೆ.ಸಿ.ಜನರಲ್ ಆಸ್ಪತ್ರೆ, ಬೆಂಗಳೂರು
10. ಎಲ್ಲಾ ಪ್ರಾಂಶುಪಾಲರು, ಎ.ಎನ್.ಎಂ ತರಬೇತಿಕೇಂದ್ರ,...................................... ಜಿಲ್ಲೆ
11. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು,..................................................
12. ಎಲ್ಲಾ ಜಿಲ್ಲಾ ಮಲೇರಿಯಾಧಿಕಾರಿಗಳು / ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು.............................................
13. ಎಲ್ಲಾ ಮುಖ್ಯ ಆಡಳಿತಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ,
14. ಎಲ್ಲಾ ಆಡಳಿತ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ..............................................................
15. ಇಲಾಖೆಯ ಎಲ್ಲಾ ಪ್ರಥಮ ದರ್ಜೆ ಸಹಾಯಕರು//ಶೀಘ್ರಲಿಪಿಗಾರರುಗಳಿಗೆ
16. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
17. ಆದೇಶ ಪ್ರತಿ/ ಕಛೇರಿ ಪ್ರತಿ.

Director
Health & Family Welfare Services,
Bengaluru.